# ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್/ಉಪಲೋಕ್/ಎಂ.ವೈ.ಎಸ್.,-1540/2017/ಡಿ.ಆರ್.ಇ-2

ಬಹುಮಹಡಿಗಳ ಕಟ್ಟಡ,
ಡಾ: ಬಿ.ಆರ್.ಅಂಬೇಡ್ಕರ್ ವೀಧಿ,
ಬೆಂಗಳೂರು.
ದಿನಾಂಕ : 26/08/2019

## ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(3) ರನ್ವಯ ವರದಿ

ವಿಷಯ: ಶ್ರೀಮತಿ ಆರ್.ಪದ್ಮಶ್ರೀ, ಉಪ ನಿರ್ದೇಶಕರು, ಗಣಿ ಮತ್ತು ಭೂವಿಜ್ಞಾನ ಇಲಾಖೆ, 1ನೇ ಮಹಡಿ, ಜುಗುಲ್ ಟವರ್ಸ್, ಮಲ್ಲಿಕಟ್ಟ, ಮಂಗಳೂರು ರವರು ಸರ್ಕಾರಿ/ಸಾರ್ವಜನಿಕ ನೌಕರರಾಗಿ ದುರ್ನಡತೆ ಎಸಗಿರುವ ಕುರಿತು ವರದಿ.

*****

ಶ್ರೀ ಅರುಣ್ ಕುಮಾರ್ ಆಳ್ವ ಬಿನ್ ಲೇಟ್ ಸಂತ ಆಳ್ವ, ಉಳಿಪಾಡಿ ಗುತ್ತು ಮನೆ, ಮಳಲಿ ಗ್ರಾಮ ಮತ್ತು ಅಂಚೆ, ಕಿನ್ನಿಕಂಬ್ಳ, ಮಂಗಳೂರು ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ (ಇನ್ನು ಮುಂದೆ 'ದೂರುದಾರರು' ಎಂದು ಕರೆಯಲ್ಪಡುತ್ತಾರೆ) ರವರು ಈ ದೂರನ್ನು, ಶ್ರೀಮತಿ ಆರ್.ಪದ್ಮಶ್ರೀ, ಉಪ ನಿರ್ದೇಶಕರು, ಗಣಿ ಮತ್ತು ಭೂವಿಜ್ಞಾನ ಇಲಾಖೆ, 1ನೇ ಮಹಡಿ, ಜುಗುಲ್ ಟವರ್ಸ್, ಮಲ್ಲಿಕಟ್ಟ, ಮಂಗಳೂರು (ಇನ್ನು ಮುಂದೆ 'ಎದುರುದಾರರು' ಎಂದು ಕರೆಯಲ್ಪಡುತ್ತಾರೆ) ರವರುಗಳ ವಿರುದ್ಧ ತನಿಖೆ ನಡೆಸಿ ಸೂಕ್ತ ಕ್ರಮ ಜರುಗಿಸಬೇಕೆಂದು ಕೋರಿರುತ್ತಾರೆ. ಸದರಿ ದೂರಿನ ಆಧಾರದ ಮೇಲೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 9 ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ತನಿಖೆಗೆ ಆದೇಶಿಸಲಾಗಿರುತ್ತದೆ.

2. ದೂರಿನ ಸಂಕ್ಷಿಪ್ತ ವಿವರ: ಮಂಗಳೂರು ತಾಲ್ಲೂಕು ಗುರುಪುರ ಹೋಬಳಿಯ ತೆಂಕಎಡಬದವು ಗ್ರಾಮದ ಸರ್ವೆ ನಂ. 99/2ರಲ್ಲಿ ಅಕ್ರಮ ಕಲ್ಲು ಗಣಿಗಾರಿಕೆ ನಡೆಯುತ್ತಿದೆ, ಈ ಬಗ್ಗೆ ತಾನು ಆಗಸ್ಟ್ 2016ರಲ್ಲಿ ನಿರ್ದೇಶಕರು, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಖನಿಜ ಭವನ, ಬೆಂಗಳೂರು ಇವರಿಗೆ ದೂರು ಸಲ್ಲಿಸಿದರೂ ಸಹಿತ ಇಲ್ಲಿಯತನಕ ಯಾವುದೇ ಕ್ರಮವನ್ನು ಜರುಗಿಸಿಲ್ಲ. ಆದ್ದರಿಂದ, ಎದುರುದಾರರ ವಿರುದ್ಧ ಸೂಕ್ತ ಕಾನೂನು ಕ್ರಮವನ್ನು ಜರುಗಿಸಬೇಕೆಂದು ಕೋರಿದ್ದಾರೆ.

3. ದೂರುದಾರರು ಹಾಜರುಪಡಿಸಿರುವ ದಾಖಲೆಗಳನ್ನು ಪರಿಶೀಲಿಸಿ, ಎದುರುದಾರರಿಗೆ, ಆಕ್ಷೇಪಣೆ ಸಲ್ಲಿಸುವಂತೆ ತಿಳಿಸಲಾಗಿತ್ತು. ಆದರೆ, ಎದುರುದಾರರು ಆಕ್ಷೇಪಣೆಗಳನ್ನು ಸಲ್ಲಿಸಿಲ್ಲ. ದಿನಾಂಕ:

11/10/2017 ರಂದು ಮಂಗಳೂರಿನಲ್ಲಿ ನಡೆದ ಕ್ಯಾಂಪ್‌ನಲ್ಲಿ ಎದುರುದಾರರು ಹಾಜರಿದ್ದು, ಕೆಲ ಕೃಷಿಕರು ತಮ್ಮ ಜಮೀನಿನಲ್ಲಿರುವ ಕಲ್ಲುಗಳನ್ನು ಪರವಾನಗಿ ಇಲ್ಲದೇ ತೆಗೆಯುತ್ತಿದ್ದಾರೆ ಮತ್ತು ಈ ಬಗ್ಗೆ ಪರವಾನಗಿ ನೀಡುವುದು ಕಾನೂನಿನಲ್ಲಿ ಜಟಿಲವಾಗಿದೆ. ಈ ಬಗ್ಗೆ ತಾನು ಸರ್ಕಾರಕ್ಕೆ ವಿಶೇಷ ನಿಯಮಾವಳಿಗಳನ್ನು ರೂಪಿಸುವಂತೆ ಮನವಿ ಮಾಡಿಕೊಂಡಿದ್ದೇನೆಂದು ತಿಳಿಸಿದ್ದರು.

4. ಮಾನ್ಯ ಗೌರವಾನ್ವಿತರು ಎದುರುದಾರರಿಗೆ ಈ ದೂರಿಗೆ ಸಂಬಂಧಪಟ್ಟಂತೆ ಸೂಕ್ತ ಕ್ರಮ ಕೈಗೊಂಡು ವರದಿ ಸಲ್ಲಿಸುವಂತೆ ಆದೇಶಿಸಿದ್ದರು.

5. ಎದುರುದಾರರು ದಿನಾಂಕ: 24/07/2019 ರಂದು ತಮ್ಮ ವರದಿಯನ್ನು ಸಲ್ಲಿಸಿದ್ದು, ಸದರಿ ವರದಿಯಲ್ಲಿ, ದೂರುದಾರರ ದೂರಿಗೆ ಸಂಬಂಧಪಟ್ಟಂತೆ ದಿನಾಂಕ: 17/11/2018 ರಂದು ಕಛೇರಿಯ ತಾಂತ್ರಿಕ ಅಧಿಕಾರಿಗಳು ಹಾಗೂ ಕಂದಾಯ ಇಲಾಖೆಯ ಗುರುಪುರ ಹೋಬಳಿಯ ಕಂದಾಯ ನಿರೀಕ್ಷಕರೊಂದಿಗೆ ಮಂಗಳೂರು ತಾಲ್ಲೂಕು ಗುರುಪುರ ಹೋಬಳಿ ತೆಂಕಎಡಪದವು ಗ್ರಾಮದ ಸರ್ವೆ ನಂ. 99/2ಕ್ಕೆ ಪ್ರದೇಶಕ್ಕೆ ಭೇಟಿ ನೀಡಿ ಪರಿಶೀಲಿಸಿದಾಗ, ಸದರಿ ಪ್ರದೇಶದಲ್ಲಿ ಕೆಂಪು ಕಲ್ಲು ಗಣಿಗಾರಿಕೆ ನಡೆಸುತ್ತಿರುವುದು ಕಂಡುಬಂದಿರುತ್ತದೆ. ಸದರಿ ಸರ್ವೆ ನಂ. 99/2 ಪಟ್ಟಾ ಜಮೀನಾಗಿರುತ್ತದೆ. ಅಕ್ರಮ ಕಲ್ಲು ಗಣಿಗಾರಿಕೆ ನಡೆಸುತ್ತಿದ್ದ ಪ್ರದೇಶದ ಮಾಲೀಕರಾದ ಶ್ರೀ ಸುರೇಶ್ ಕುಮಾರ್ ಬಿನ್ ದಿ.ಸದಾಶಿವ ನಾಯ್ಕ, ಗೀತಾ ಫಾರಮ್ಸ, ವಡೂರು ಗಂಜಿಮಠ ಹಾಗೂ ಶ್ರೀ ಜನಾರ್ಧನ್ ಪೂಜಾರಿ, ಮಳಲಿ ಗ್ರಾಮ ಮತ್ತು ಅಂಚೆ, ಕಿನ್ನಿಕಂಬ್ಳ, ಮಂಗಳೂರು ತಾಲ್ಲೂಕು ಇವರು ಆಗಿದ್ದಾರೆ.

6. ಸದರಿ ಕೆಂಪು ಕಲ್ಲು ತೆಗೆದಿರುವ ಜಾಗವನ್ನು ಕಛೇರಿಯ ಸಹಾಯಕ ಅಭಿಯಂತರರು ಜಿ.ಪಿ.ಎಸ್., ಮೂಲಕ ಪ್ರತ್ಯೇಕವಾಗಿ ಅಳತೆ ಮಾಡಿದಾಗ, ಸದರಿ ಪ್ರದೇಶದಲ್ಲಿ ಅಂದಾಜು 18638 ಟನ್‌ಗಳಷ್ಟು ಕೆಂಪು ಕಲ್ಲನ್ನು ತೆಗೆದು ಅನುಪಯುಕ್ತ ಮಾಡಲು ಸರ್ವೆ ನಂ. 99/2ರ ಜಾಗದಲ್ಲಿ ರಾಶಿ ಹಾಕಿರುತ್ತಾರೆ. ಅಕ್ರಮವಾಗಿ ಕೆಂಪು ಕಲ್ಲು ತೆಗೆಯಲು ಬಳಸುತ್ತಿದ್ದ ಕಟ್ಟಿಂಗ್ ಮೆಷಿನ್ ಹಾಗೂ ಕಲ್ಲು ತುಂಬಿದ ಲಾರಿಯನ್ನು ಸ್ಥಳ ಮಹಜರ್ ಮಾಡಿ ಇಲಾಖಾ ವಶಕ್ಕೆ ಪಡೆಯಲಾಗಿದೆ. ದೂರುದಾರರು ಆಪಾದಿಸಿದಂತೆ ಶ್ರೀ ಸುರೇಶ್ ಕುಮಾರ್ ಮತ್ತು ಶ್ರೀ ಜನಾರ್ಧನ್ ಪೂಜಾರಿ ಇವರಿಗೆ ಕಲ್ಲು ಗಣಿಗಾರಿಕೆ ಮಾಡಲು ಯಾವುದೇ ರೀತಿಯ ಅನುಮತಿ ನೀಡಿರುವುದಿಲ್ಲ. ಆದರೂ ಸಹಿತ ಸದರಿ ವ್ಯಕ್ತಿಗಳು ಕರ್ನಾಟಕ ಉಪ ಖನಿಜ ರಿಯಾಯಿತಿ ನಿಯಮಾವಳಿ 1994ರ ನಿಯಮಗಳನ್ನು ಉಲ್ಲಂಘಿಸಿ

1540

ಅಕ್ರಮವಾಗಿ ಕಲ್ಲು ಗಣಿಗಾರಿಕೆ ನಡೆಸಿದ್ದಾರೆ. ಅವರಿಗೆ ದಿನಾಂಕ: 20/12/2018 ರಂದು ನೋಟಿಸ್ ಜಾರಿ ಮಾಡಲಾಗಿರುತ್ತದೆ. ಆದರೆ, ಅವರು ಕಛೇರಿಗೆ ಹಾಜರಾಗಿ ಹೇಳಿಕೆಯನ್ನು ಸೂಕ್ತ ದಾಖಲೆಗಳೊಂದಿಗೆ ಸಲ್ಲಿಸದೇ ಇರುವುದರಿಂದ ಕರ್ನಾಟಕ ಉಪ ಖನಿಜ ರಿಯಾಯಿತಿ ನಿಯಮಾವಳಿ 1994ರ ತಿದ್ದುಪಡಿ ನಿಯಮ 43(8) ರಂತೆ ನ್ಯಾಯಾಲಯದಲ್ಲಿ ದಾವೆ ಹೂಡುವುದಕ್ಕಾಗಿ ಸೂಕ್ತ ಸಮಜಾಯಿಷಿಯೊಂದಿಗೆ ಲಿಖಿತ ಹೇಳೀಕೆಯನ್ನು ತಮ್ಮ ಕಛೇರಿಗೆ ಸಲ್ಲಿಸುವಂತೆ ದಿನಾಂಕ: 21/03/2019 ರಂದು ನೋಟಿಸ್–2ನ್ನು ನೊಂದಾಯಿತ ಅಂಚೆ ಮೂಲಕ ಕಳುಹಿಸಲಾಗಿದೆ ಮತ್ತು ಅವರು ನೀಡಿರುವ ಉತ್ತರ ಸಮರ್ಪಕವಾಗದೇ ಇರುವುದರಿಂದ ದಿನಾಂಕ: 16/04/2019 ರಂದು ಸದರಿ ಆರೋಪಿಗಳ ವಿರುದ್ಧ ಮಾನ್ಯ ಜೆ.ಎಂ.ಎಫ್.ಸಿ., 6ನೇ ನ್ಯಾಯಾಲಯ, ಮಂಗಳೂರು ರಲ್ಲಿ ಖಾಸಗಿ ದೂರನ್ನು ದಾಖಲಿಸಲಾಗಿದೆಯೆಂದು ವರದಿ ಸಲ್ಲಿಸಿ ಅಗತ್ಯ ದಾಖಲೆಗಳನ್ನು ಹಾಜರುಪಡಿಸಿರುತ್ತಾರೆ.

7. ದೂರುದಾರರು ಹಾಜರುಪಡಿಸಿರುವ ದಾಖಲೆಗಳನ್ನು ಪರಿಶೀಲಿಸಲಾಗಿ, ಅವರು ಸರ್ವೆ ನಂ. 99/2ರಲ್ಲಿ ಅಕ್ರಮ ಗಣಿಗಾರಿಕೆ ನಡೆಯುತ್ತಿದೆಯೆಂದು ದಿನಾಂಕ: 22/08/2016 ರಂದು ನಿರ್ದೇಶಕರು, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಖನಿಜ ಭವನ, ಬೆಂಗಳೂರು ಇವರಿಗೆ ದೂರು ಸಲ್ಲಿಸಿದ್ದ. ಎದುರುದಾರು ಹಾಜರುಪಡಿಸಿರುವ ವರದಿಯಿಂದ ಶ್ರೀ ಸುರೇಶ್ ನಾಯ್ಕ ಮತ್ತು ಜನಾರ್ಧನ್ ಪೂಜಾರಿ ಇಬ್ಬರು ಸರ್ವೆ ನಂ. 99/2ರಲ್ಲಿ ಕೆಂಪು ಕಲ್ಲು ಗಣಿಗಾರಿಕೆಯನ್ನು ಕರ್ನಾಟಕ ಉಪ ಖನಿಜ ರಿಯಾಯಿತಿ ನಿಯಮಾವಳಿ 1994ರ ನಿಯಮಗಳನ್ನು ಉಲ್ಲಂಘಿಸಿದ್ದಾರೆ ಎಂಬುದು ಮತ್ತು ಸದರಿ ಅಕ್ರಮ ಗಣಿಗಾರಿಕೆ ನಡೆಸಿದವರ ವಿರುದ್ಧ 6ನೇ ಜೆ.ಎಂ.ಎಫ್.ಸಿ., ನ್ಯಾಯಾಲಯ, ಮಂಗಳೂರು ಇವರಲ್ಲಿ ದಿನಾಂಕ: 16/04/2019 ರಂದು ಖಾಸಗಿ ದೂರನ್ನು ಸಲ್ಲಿಸಿದ್ದಾರೆ ಎನ್ನುವುದು ವರದಿಯೊಂದಿಗೆ ಹಾಜರುಪಡಿಸಿರುವ ದಾಖಲೆಗಳಿಂದ ಕಂಡುಬರುತ್ತದೆ.

8. ಎದುರುದಾರರು ಶ್ರೀ ಸುರೇಶ್ ನಾಯ್ಕ ಮತ್ತು ಜನಾರ್ಧನ್ ಪೂಜಾರಿ ರವರು ತೆಂಕಎಡಪದರು ಗ್ರಾಮದ ಸರ್ವೆ ನಂ. 99/2ರಲ್ಲಿ ಅಕ್ರಮ ಕಲ್ಲು ಗಣಿಗಾರಿಕೆ ಮಾಡಿದ್ದಾರೆ, ಸದರಿ ಜಾಗವನ್ನು ಸಹಾಯಕ ಅಭಿಯಂತರರು ಜಿ.ಪಿ.ಎಸ್., ಯಂತ್ರದ ಮೂಲಕ ಅಳತೆ ಮಾಡಿದಾಗ, ಸದರಿ ವ್ಯಕ್ತಿಗಳು ಒಟ್ಟು 5929 ಚ.ಮೀಟರ್ ಪ್ರದೇಶದಲ್ಲಿ ಕೆಂಪು ಕಲ್ಲು ಗಣಿಗಾರಿಕೆ ನಡೆಸಿ ಒಟ್ಟು 18638 ಮೆಟ್ರಿಕ್ ಟನ್ ಖನಿಜ ತೆಗೆದಿರುವ ಅಂದಾಜು ಪ್ರಮಾಣವಾಗಿದೆಯೆಂದು ತಿಳಿಸಿದ್ದಾರೆ. ಆದರೆ, ಅಷ್ಟೊಂದು

ಪ್ರಮಾಣದ ಖನಿಜವನ್ನು ತೆಗೆದಿರುವುದಕ್ಕಾಗಿ ಎದುರುದಾರರು ಕರ್ನಾಟಕ ಉಪ ಖನಿಜ ರಿಯಾಯಿತಿ ನಿಯಮಾವಳಿ 1994ರ ನಿಯಮಗಳನ್ವಯ ದಂಡ ವಿಧಿಸಿ ಸರ್ಕಾರಕ್ಕೆ ಹಣವನ್ನು ಜಮಾ ಮಾಡಿಸಿದ್ದಾರೋ ಹೇಗೋ ಎನ್ನುವ ಬಗ್ಗೆ ಯಾವುದೇ ರೀತಿಯಿಂದ ತಮ್ಮ ವರದಿಯಲ್ಲಿ ಉಲ್ಲೇಖಿಸಿಲ್ಲ. ಅಲ್ಲದೇ ಸದರಿ ಅಕ್ರಮ ಗಣಿಗಾರಿಕೆಯನ್ನು ನಿರ್ಬಂಧಿಸಿದ ಬಗ್ಗೆ ಉಲ್ಲೇಖಿಸಿಲ್ಲ ಮತ್ತು ಈ ರೀತಿಯಾಗಿ ಅಕ್ರಮ ಕೆಂಪು ಕಲ್ಲು ಗಣಿಗಾರಿಕೆ ತಮ್ಮ ಅಧಿಕಾರ ವ್ಯಾಪ್ತಿ ಸ್ಥಳದಲ್ಲಿ ನಡೆಯುತ್ತಿದ್ದರೂ ಸಹಿತ ಯಾವುದೇ ಕ್ರಮವನ್ನು ಕೈಗೊಳ್ಳದೇ ಇರುವುದು ಮತ್ತು ಸ್ಥಳ ಪರಿಶೀಲನೆ ಮಾಡದೇ ಇರುವುದನ್ನು ನೋಡಿದಾಗ ಎದುರುದಾರರು ಕರ್ತವ್ಯ ಲೋಪವೆಸಗಿದ್ದಾರೆ ಎಂಬುದು ಮೇಲ್ನೋಟಕ್ಕೆ ಕಂಡುಬರುತ್ತದೆ.

9. ಮೇಲೆ ಚರ್ಚಿಸಿದ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ನಾಗರೀಕ ಸೇವೆ (ನಡತೆ) ನಿಯಮ 1966ರ ನಿಯಮಗಳು 3(1)(ii) ಮತ್ತು (iii) ರನ್ವಯ ಎದುರುದಾರರು ಶಿಸ್ತು ಕ್ರಮಕ್ಕೆ ಬಾಧ್ಯರಾಗಿರುತ್ತಾರೆಂದು ಕಂಡುಬಂದಿದ್ದರಿಂದ, **ಎದುರುದಾರರಾದ-ಶ್ರೀಮತಿ ಆರ್.ಪದ್ಮಶ್ರೀ,** ಉಪ ನಿರ್ದೇಶಕರು, ಗಣಿ ಮತ್ತು ಭೂವಿಜ್ಞಾನ ಇಲಾಖೆ, 1ನೇ ಮಹಡಿ, ಜುಗುಲ್ ಟವರ್ಸ್, ಮಲ್ಲಿಕಟ್ಟೆ, ಮಂಗಳೂರು **(ನಿವೃತ್ತಿ ದಿನಾಂಕ: 31/03/2035)** ಇವರ ವಿರುದ್ಧ ಶಿಸ್ತು ನಡವಳಿಕೆ ಕ್ರಮ ಜರುಗಿಸಲು ಮತ್ತು ಹಾಗೆಯೇ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಬಂಧ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 14-ಎ ರ ಅಡಿಯಲ್ಲಿ ಇಲಾಖಾ ವಿಚಾರಣೆ ನಡೆಸಲು ಹಾಗೂ ಈ ಪ್ರಾಧಿಕಾರಕ್ಕೆ ಒಪ್ಪಿಸುವಂತೆ ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 12(3) ರನ್ವಯ ಪ್ರದತ್ತವಾದ ಅಧಿಕಾರದಡಿ, ಶಿಸ್ತು ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಿದೆ.

10. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(4)ರ ಪ್ರಕಾರ, ಶಿಸ್ತು ಪ್ರಾಧಿಕಾರವು ವರದಿಯನುಸಾರ ಕೈಗೊಂಡ ಕ್ರಮದ ಬಗ್ಗೆ ಅಥವಾ ಕೈಗೊಳ್ಳಬಹುದಾದ ಕ್ರಮದ ಬಗ್ಗೆ, ಈ ವರದಿ ತಲುಪಿದ ದಿನಾಂಕದಿಂದ **ಮೂರು ತಿಂಗಳೊಳಗಾಗಿ** ಈ ಪ್ರಾಧಿಕಾರಕ್ಕೆ ವರದಿ ಮಾಡಲು ಸೂಚಿಸಲಾಗಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

N. Anande
26/8

[ನ್ಯಾಯಮೂರ್ತಿ ಎನ್. ಆನಂದ]
ಉಪಲೋಕಾಯುಕ್ತರು,
ಕರ್ನಾಟಕ ರಾಜ್ಯ, ಬೆಂಗಳೂರು.

SP. KLA. Tum